# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7317/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ರಘುರಾಮ್, ಕನ್ನಾರು, ಚೇರ್ಕಾಡಿ ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ರಘುರಾಮ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಚೇರ್ಕಾಡಿ ಗ್ರಾಮದ ಕನ್ನಾರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವು 'ಸಿ' ದರ್ಜೆಯ ದೇವಸ್ಥಾನವಾಗಿರುತ್ತದೆ. ಈ ದೇವಸ್ಥಾನದ ಮೇಲ್ವಿಚಾರಣೆಯನ್ನು ಶ್ರೀ ಶ್ಯಾಮರಾಜ್ ಹೆಗ್ಗಡೆ ಇವರು ನಿರ್ವಹಿಸುತ್ತಿರುತ್ತಾರೆ. ಕಳೆದ ಐದು ವರ್ಷಗಳಿಂದ ಶ್ರೀ ಶ್ಯಾಮರಾಜ್ ಹೆಗ್ಗಡೆ ಯವರು ವ್ಯವಸ್ಥಾಪನ ಸಮಿತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದು, ಅವ್ಯವಹಾರ ಮಾಡಿರುತ್ತಾರೆ. 2013-14ನೇ ಸಾಲಿನಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದ ಹಣದ ವ್ಯವಹಾರದಲ್ಲಿ ತಾವು ಒಬ್ಬರೇ ಸಹಿ ಮಾಡಿ ಹಣವನ್ನು ಡ್ರಾ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಸಮಿತಿಯವರು ಅವರ ವಿರುದ್ಧ ದೂರು ನೀಡಿದಾಗ ಬ್ಯಾಂಕ್‌ನವರು ಸದರಿ ಖಾತೆಯನ್ನು ಮುಟ್ಟುಗೋಲು ಹಾಕಿರುತ್ತಾರೆ. ಇದಲ್ಲದೇ, ದೇವಸ್ಥಾನಕ್ಕೆ ಸೇರಿದ ಕಾಣಿಕೆ ಹುಂಡಿ ಹಣವನ್ನು ಅವರೊಬ್ಬರೇ ಲೆಕ್ಕಾಚಾರ ಮಾಡಿದ್ದು, ಈ ಬಗ್ಗೆ ವ್ಯವಸ್ಥಾಪನ ಸಮಿತಿಯವರು ದತ್ತಿ ಇಲಾಖೆಗೆ ದೂರು ನೀಡಿದಾಗ, ಸದರಿ ಹುಂಡಿಗೆ ಬೀಗಮುದ್ರೆ ಹಾಕಲಾಗಿರುತ್ತದೆ. ದೇವಸ್ಥಾನದ ವ್ಯವಹಾರಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ಕೇಳಿದರು, ಮಾಹಿತಿ ನೀಡುತ್ತಿರುವುದಿಲ್ಲ. ದೇವಸ್ಥಾನದ ನಿರ್ಣಯ ಪುಸ್ತಕ, ರಶೀದಿ ಪುಸ್ತಕ, ಸೀಲು, ಲೆಟರ್ ಹೆಡ್‌ಗಳನ್ನು ಕೂಡ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ಒಂದು ವರ್ಷದಿಂದ ಸಮಿತಿಯ ಮೀಟಿಂಗ್ ಮಾಡಿರುವುದಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಸದರಿ ಶ್ರೀ ಶ್ಯಾಮರಾಜ್ ಹೆಗ್ಗಡೆಯವರು ಪೊಲೀಸರಿಗೆ ಫಿರ್ಯಾದನ್ನು ನೀಡಿ ತೊಂದರೆ ಕೊಡುತ್ತಿರುತ್ತಾರೆ. ಈಗ ಕೆಲಸ ನಿರ್ವಹಿಸುತ್ತಿರುವ ಅರ್ಚಕರು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದರೂ, ಅವರನ್ನು ಬದಲಿಸಲು ನೋಟೀಸ್ ನೀಡಿರುತ್ತಾರೆ. ಈ ವಿಚಾರಗಳನ್ನು ದತ್ತಿ ಇಲಾಖೆಯ ಸಹಾಯಕ ಆಯುಕ್ತರಾದ ಶ್ರೀ ದೊಡ್ಡಮನಿಯವರಿಗೆ ದೂರು ನೀಡಿದ್ದರೂ, ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು

ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಆದರೆ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 1ನೇ ಎದುರುದಾರರಿಗೆ ಅವರಿಗೆ ನೀಡಲಾಗಿದ್ದ ನೋಟೀಸ್ ಪತ್ರವು ತಲುಪಿರುವ ಬಗ್ಗೆ ಪೋಸ್ಟಲ್ ವೆಬ್‌ಸೈಟ್‌ನಲ್ಲಿ ಮಾಹಿತಿ ದೊರೆತಿರುತ್ತದೆ. ಆದ್ದರಿಂದ, 1ನೇ ಎದುರುದಾರರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅಕ್ಟೋಬರ್ 2013 ರಿಂದ 2014 ರವರೆಗೆ ಚೆಕ್‌ಗಳಿಗೆ ಶ್ರೀ ಶ್ಯಾಮರಾಜ್ ಹೆಗ್ಗಡೆಯವರೊಬ್ಬರೇ ಸಹಿ ಮಾಡಿ ಹಣ ಡ್ರಾ ಮಾಡಿರುತ್ತಾರೆ. ನಂತರ ಸಮಿತಿಯ ಸದಸ್ಯರುಗಳು ಬ್ಯಾಂಕಿಗೆ ದೂರು ನೀಡಿದ ಕಾರಣ, ಸದರಿ ಖಾತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ ಹಾಗೂ ದೇವಸ್ಥಾನದ ಹುಂಡಿಗೆ ಸರ್ಕಾರದ ಬೀಗ ಮುದ್ರೆ ಹಾಕಲಾಗಿರುತ್ತದೆ. ದೂರುದಾರರು ಶ್ರೀ ಶ್ಯಾಮರಾಜ್ ಹೆಗ್ಗಡೆ ಯವರ ಮೇಲೆ ಮಾಡಲಾದ ಆಪಾದನೆ ಬಗ್ಗೆ ಸಹಾಯಕ ಆಯುಕ್ತರಾದ ತಾವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂಬ ಮಾಡಿರುವ ಆರೋಪದಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ ಹಾಗೂ ಆರೋಪವು ನಿರಾಧಾರವಾಗಿರುತ್ತದೆ. ತಾನು ಉಡುಪಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಧಾರ್ಮಿಕದತ್ತಿ ತಹಶೀಲ್ದಾರ್‌ರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಕೆಲಸದ ಜೊತೆಗೆ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರಾಗಿ ದಿ:07/11/2014 ರವರೆಗೆ ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಹಾಗೂ ಸಹಾಯಕ ಆಯುಕ್ತರ ಕಛೇರಿಗೆ ಬರುವ ದೂರುಗಳಿಗೆ ಸಂಬಂಧಿಸಿದಂತೆ ತಮ್ಮ ಇಲಾಖೆಯ ಪರಿವೀಕ್ಷಕರಿಂದ ಸ್ಥಳ ತನಿಖೆ ವರದಿ ಪಡೆದು ವಿಚಾರಣೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಉಡುಪಿ ಜಿಲ್ಲೆಯಲ್ಲಿ 2 ಪರಿವೀಕ್ಷಕರ ಹುದ್ದೆ ಇದ್ದು, 1 ಹುದ್ದೆ ಖಾಲಿ ಇದ್ದ ಕಾರಣ, ಇದ್ದ ಒಬ್ಬ ಪರಿವೀಕ್ಷಕರಿಗೆ ಕೆಲಸದ ಒತ್ತಡ ಅಧಿಕವಾಗಿದ್ದು, ದೇವಸ್ಥಾನದ ಆಡಳಿತ ಮಂಡಳಿಯ ಸಮಿತಿಯ ಸದಸ್ಯರು ದಿ:07/02/2014 ಮತ್ತು 20/02/2014 ರಂದು ದೂರು ಅರ್ಜಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ದೂರಿನ ವಿಷಯವಾಗಿ ಇಲಾಖಾ ಪರಿವೀಕ್ಷಕರಿಂದ ದಿ:19/03/2014 ರಂದು ಸ್ಥಳ ತನಿಖಾ ವರದಿ ಪಡೆದು ಹಾಜರುಪಡಿಸಲಾಗಿದ್ದ ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ದಿ:12/06/2014 ರಂದು ವಿವರವಾದ ವರದಿಯನ್ನು ಸಲ್ಲಿಸಲಾಗಿರುತ್ತದೆ. ಅದರಂತೆ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಪರಿವೀಕ್ಷಕರ ವರದಿ ಮೇರೆಗೆ ದೇವಸ್ಥಾನದ

ಅಧ್ಯಕ್ಷರು ಕಳೆದ ಐದು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮಸ್ಥರ ಮತ್ತು ವ್ಯವಸ್ಥಾಪನ ಸಮಿತಿ ಸದಸ್ಯರ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದು, ಸಮಿತಿಯ ಯಾವುದೇ ಸಭೆ ನಡೆಸಿರುವುದಿಲ್ಲ. ಅಧ್ಯಕ್ಷರೆ ನಿರ್ಣಯ ತೆಗೆದುಕೊಂಡಿರುತ್ತಾರೆ. ಹಾಗೆಯೇ ದೂರುದಾರರು ತಿಳಿಸಿರುವಂತೆ ಸಮಿತಿಯ ಸದಸ್ಯರುಗಳಿಗೆ ಸಭೆಯಲ್ಲಿ ಭಾಗವಹಿಸಲು ಹಾಗೂ ಚರ್ಚಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ. ವ್ಯವಸ್ಥಾಪನ ಸಮಿತಿಯ ಸದಸ್ಯರಲ್ಲಿ ಭಿನ್ನಾಬಿಪ್ರಾಯ ಉಂಟಾಗಿ ವ್ಯವಸ್ಥಾಪನ ಸಮಿತಿಯ ನಿಯಮಾನುಸಾರ ಕರ್ತವ್ಯನಿರ್ವಹಿಸಲು ವಿಫಲವಾಗಿರುತ್ತದೆ. ಆದ್ದರಿಂದ, ಸದರಿ ಸಮಿತಿಯನ್ನು ಭರ್ಕಾಸ್ತುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದು ಸೂಕ್ತವೆಂದು ಅಭಿಪ್ರಾಯ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ತಾನು ಸಲ್ಲಿಸಿರುತ್ತೇನೆಂದು ತಿಳಿಸಿರುತ್ತಾರೆ.

4. ಮುಂದುವರೆದು, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಸದರಿ ದೇವಸ್ಥಾನಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಕುರಿತು ದಿ:30/06/2014 ರಂದು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಈ ವಿಷಯ ಮಂಡಿಸಲಾಗಿರುತ್ತದೆ. ಆದರೆ, ಆ ಸಭೆಯಲ್ಲಿ ಆ ದಿನ ತೀರ್ಮಾನವಾಗದೆ ವಿಷಯವನ್ನು ಮುಂದೂಡಲಾಗಿರುತ್ತದೆ. ಆದ್ದರಿಂದ, ತಾನು ಸಹಾಯಕ ಆಯುಕ್ತನಾಗಿ ಯಾವುದೇ ಕ್ರಮ ಕೈಗೊಂಡಿಲ್ಲವೆಂಬ ಮಾಡಿರುವ ಆರೋಪ ಸರಿಯಲ್ಲ. ಅಧ್ಯಕ್ಷರು ಕಾಣಿಕೆ ಹುಂಡಿಯನ್ನು ಒಬ್ಬರೇ ತೆಗೆದು ಎಣಿಕೆ ಮಾಡುತ್ತಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತಾನು ನಿಯಮಾನುಸಾರ ದೇವಸ್ಥಾನದ ಹುಂಡಿಯನ್ನು ಇಲಾಖೆಯ ಮೊಹರ್ ಮಾಡಿಸಲಾಗಿರುತ್ತದೆ ಎಂದು ತದನಂತರ ಹುಂಡಿ ಭರ್ತಿಯಾದಾಗ ಇಲಾಖಾ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಹಾಗೂ ಸಮಿತಿ ಸದ್ಯಸರ ಸಮ್ಮುಖದಲ್ಲಿ ಹುಂಡಿಗಳನ್ನು ತೆರೆದು ಹಣ ಎಣಿಕೆ ಮಾಡಿ ಜಮ ಮಾಡಲಾಗಿರುತ್ತದೆ. ಅದರಂತೆ, ದಿ:20/06/2014 ರಂದು ಹುಂಡಿ ಹಣ ಎಣಿಕೆಮಾಡಿ ರೂ.1,50,136/- ಅನ್ನು ದಿ:20/06/2014 ರಂದು ಬ್ಯಾಂಕಿಗೆ ಜಮಾ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ಮುಂದುವರೆದು, ವ್ಯವಸ್ಥಾಪನ ಸಮಿತಿ ಸದಸ್ಯರು ಬ್ಯಾಂಕಿಗೆ ದೂರು ನೀಡಿದ ಹಿನ್ನೆಲೆಯಲ್ಲಿ, ಬ್ಯಾಂಕ್ ಖಾತೆಯ ವ್ಯವಹರಣೆಯನ್ನು ಮಾಡಲು ಅಧ್ಯಕ್ಷರಿಗೆ ಬ್ಯಾಂಕ್‌ನವರು ಅವಕಾಶ ಮಾಡಿಕೊಟ್ಟಿರುವುದಿಲ್ಲ. ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪೆಟಿಷನ್ ನಂಬರ್ 29791/2014 ಅನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿ ಬ್ಯಾಂಕ್ ಖಾತೆಯ ನಿರ್ವಹಣೆಗೆ ನಿರ್ದೇಶನ ಕೋರಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಸಿಬ್ಬಂದಿಗಳ ವೇತನ ಬಟವಾಡೆಗೆ ಸಂಬಂಧಿಸಿದಂತೆ ಸಹಾಯಕ ಆಯುಕ್ತರು ಮತ್ತು ಅಧ್ಯಕ್ಷರು ಜಂಟಿಯಾಗಿ ಬ್ಯಾಂಕ್ ಖಾತೆ ನಿರ್ವಹಿಸುವಂತೆ ದಿ: 02/07/2014 ರಂದು ಮಧ್ಯಂತರ

ಆದೇಶವನ್ನು ಹೊರಡಿಸಿರುತ್ತದೆ. ಆದ್ದರಿಂದ, ದೇವಸ್ಥಾನದ ಬ್ಯಾಂಕ್ ಖಾತೆಯನ್ನು ಸಹಾಯಕ ಆಯುಕ್ತರು ಮತ್ತು ಅಧ್ಯಕ್ಷರ ಜಂಟಿ ಸಹಿಯೊಂದಿಗೆ ನಿರ್ವಹಿಸಲಾಗುತ್ತಿತ್ತು, ದೂರುದಾರರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಮಾಹಿತಿ ಕೋರಿ ದಿ:20/02/2014 ರಂದು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿರುತ್ತಾರೆ. ದೂರುದಾರರು ಕೋರಿದ್ದ ಮಾಹಿತಿಯನ್ನು ದೇವಸ್ಥಾನದ ಅಧ್ಯಕ್ಷರು ನೀಡಬೇಕಾಗಿದ್ದರಿಂದ ಮಾಹಿತಿಯನ್ನು ಕಾಲಮಿತಿಯಲ್ಲಿ ಒದಗಿಸುವಂತೆ ಮಾಹಿತಿ ಹಕ್ಕು ಕಾಯ್ದೆಯ ಅಧಿನಿಯಮ ಕಲಂ 6(3)ರ ಪ್ರಕಾರ ಅವರ ಮನವಿಯನ್ನು ದಿ:24/02/2014 ರಂದು ಅಧ್ಯಕ್ಷರಿಗೆ ವರ್ಗಾಯಿಸಲಾಗಿರುತ್ತದೆ. ನಂತರ ದೇವಸ್ಥಾನದ ಅಧ್ಯಕ್ಷರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲವೆಂದು ದೂರುದಾರರು ದಿ:30/04/2014 ರಂದು ಸಹಾಯಕ ಆಯುಕ್ತರಾದ ತಮಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯನ್ನು ಮೇಲ್ಮನವಿಯೆಂದು ಪರಿಗಣಿಸಿ ದೂರುದಾರರಿಗೆ ಹಾಗೂ ದೇವಸ್ಥಾನದ ಅಧ್ಯಕ್ಷರಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಲಾಗಿರುತ್ತದೆ. ವಿಚಾರಣಾ ಸಮಯದಲ್ಲಿ ದೂರುದಾರರಿಗೆ ಮಾಹಿತಿ ಒದಗಿಸದೇ ಇರುವುದರಿಂದ, ದೂರುದಾರರಿಗೆ ಮಾಹಿತಿ ಒದಗಿಸುವಂತೆ ಹಾಗೂ ಮಾಹಿತಿ ಒದಗಿಸದೇ ಇದ್ದಲ್ಲಿ ಅಧ್ಯಕ್ಷರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಸಲಾಗಿರುತ್ತದೆ. ನಂತರ ಆಡಳಿತ ಮಂಡಳಿಯ ಅಧ್ಯಕ್ಷರು ಮಾಹಿತಿಯನ್ನು ನೀಡದೇ ಇದ್ದ ಕಾರಣ, ಒಂದು ವಾರದ ಒಳಗೆ ಮಾಹಿತಿಯನ್ನು ಒದಗಿಸಬೇಕೆಂದು ಇಲ್ಲದೇ ಹೋದಲ್ಲಿ ದಂಡನೆ ವಿಧಿಸಬೇಕಾಗುತ್ತದೆ ಎಂದು ತಿಳಿಸಿ ಅಧ್ಯಕ್ಷರ ಗಮನಕ್ಕೆ ತರಲಾಗಿತ್ತೆಂದು, ಈ ವಿಚಾರದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಸಹ ದೂರುದಾರರಿಗೆ ಕೋರಿರುವ ಮಾಹಿತಿಯನ್ನು ಒದಗಿಸುವಂತೆ ನಿರ್ದೇಶನ ನೀಡಿರುತ್ತಾರೆ.

6. ದೂರುದಾರರು ದಿ:17/11/2014 ರಂದು ಸಲ್ಲಿಸಿದ್ದ ಅರ್ಜಿ ಮೇರೆಗೆ ಮಾಹಿತಿಯನ್ನು ನೀಡಬೇಕೆಂದು ಅನೇಕ ಸಾರಿ ನಿರ್ದೇಶನ ನೀಡಿದ್ದಾಗ್ಯೂ ಸಹ ಅಧ್ಯಕ್ಷರು ಯಾವುದೇ ಮಾಹಿತಿ ಒದಗಿಸದೇ ಇದ್ದ ಕಾರಣ, ದೂರುದಾರರು ಸಾರ್ವಜನಿಕ ಮಾಹಿತಿ ಅಧಿಕಾರಿ ವಿರುದ್ಧ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ. ದೂರುದಾರರಿಗೆ ಮಾಹಿತಿ ಒದಗಿಸದೇ ಇದ್ದ ಕಾರಣ, ಸಹಾಯಕ ಆಯುಕ್ತರ ಕಛೇರಿ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯಿಂದ ದೂರುದಾರರು ದಿ:20/02/2014ರ ಅರ್ಜಿಯಲ್ಲಿ ಕೋರಿದ್ದ ಮಾಹಿತಿಯನ್ನು ಒದಗಿಸುವಂತೆ ಅನೇಕ ಬಾರಿ ನಿರ್ದೇಶನನೀಡಿದ್ದಾಗ್ಯೂ ಸಹ ಮಾಹಿತಿಯನ್ನು ಒದಗಿಸದೇ ಇದ್ದ ಕಾರಣ, 2ನೇ ಮೇಲ್ಮನವಿ ಪ್ರಾಧಿಕಾರವಾದ ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಇವರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದೆಂದು ದೂರುದಾರರಿಗೆ ತಿಳಿಸಲಾಗಿರುತ್ತದೆ. ದೂರುದಾರರಿಗೆ ಮಾಹಿತಿ ಒದಗಿಸುವಾಗ ಕೈ ತಪ್ಪಿನಿಂದ ಅಕ್ಷರಗಳಲ್ಲಿ ವ್ಯತ್ಯಾಸವಾಗಿರುತ್ತದೆ. ದೂರುದಾರರ

ತಂದೆ ಹೆಸರು ಶ್ರೀ ಶಿವಾನಾಯ್ಕ ಎಂಬುದರ ಬದಲಾಗಿ ಶ್ರೀ ಶೀನನಾಯ್ಕ ಎಂದು ತಪ್ಪಾಗಿ ಬೆರಳಚ್ಚು ಮಾಡಲಾಗಿರುತ್ತದೆ. ಇದು ಉದ್ದೇಶಪೂರ್ವಕವಾಗಿ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

7. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ ಹಾಗೂ ತಮ್ಮ ಪ್ರತ್ಯುತ್ತರದಲ್ಲಿ ದೂರಿನಂಶಗಳನ್ನೇ ಪುನರುಚ್ಚರಿಸಿರುತ್ತಾರೆ.

8. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ದೂರುದಾರರು ತಿಳಿಸಿರುವಂತೆ ದೂರಿನ ವಿಷಯಗಳಿಗೆ ಸಂಬಂಧಿಸಿದಂತೆ ದೇವಸ್ಥಾನದ ವಿಚಾರದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲವೆಂಬ ಆರೋಪವು ಸಮಂಜಸವಲ್ಲವೆಂದು ಕಂಡುಬರುತ್ತದೆ. ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ಶ್ರೀ ದುರ್ಗಪರಮೇಶ್ವರಿ ದೇವಸ್ಥಾನದ ಆಡಳಿತ ಸಮಿತಿಯವರು ಸಲ್ಲಿಸಿರುವ ದೂರಿನ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲವೆಂಬುದು ಸರಿಯಲ್ಲವೆಂದು ಕಂಡು ಬರುತ್ತದೆ. ಎದುರುದಾರರು ತಮ್ಮ ಆಕ್ಷೇಕಪಣೆಯಲ್ಲಿ ತಿಳಿಸಿರುವಂತೆ ವ್ಯವಸ್ಥಾಪನ ಸಮಿತಿಯ ಸದಸ್ಯರುಗಳು ನೀಡಿದ ದೂರಿನ ಮೇರೆಗೆ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ (ಸದರಿ ವರದಿಯನ್ನು ಹಾಜರುಪಡಿಸಲಾಗಿದೆ). ಅದರಲ್ಲಿ ವ್ಯವಸ್ಥಾಪನ ಸಮಿತಿಯನ್ನು ಭರ್ಕಾಸ್ತುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಸೂಚಿಸಿರುವುದು ಕಂಡು ಬರುತ್ತದೆ. ದಿ:30/06/2014 ರಂದು ಧಾರ್ಮಿಕ ಪರಿಷತ್ ಸಭೆಯನ್ನು ನಡೆಸಿದ್ದು, ಸದರಿ ಧಾರ್ಮಿಕ ಪರಿಷತ್ ಸಭೆಯನ್ನು ಮುಂದೂಡಿರುವುದು ಸದರಿ ಧಾರ್ಮಿಕ ಪರಿಷತ್ ಸಭೆಯ ನಡುವಳಿಯ ಪ್ರತಿಯಿಂದ ಕಂಡು ಬರುತ್ತದೆ (ಸದರಿ ನಡುವಳಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ಧಾರ್ಮಿಕ ದತ್ತಿ ಇಲಾಖೆಯ ಪರಿವೀಕ್ಷಕರ ವರದಿಯನ್ನು ಎದುರುದಾರರು ಹಾಜರುಪಡಿಸಿರುತ್ತಾರೆ. ದಿ:17/06/2014 ರ ಪತ್ರದ ಮುಖೇನ ಸಹಾಯಕ ಆಯುಕ್ತರು ಶ್ರೀ ದುರ್ಗಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನ ಸಮಿತಿಯವರಿಗೆ ಪತ್ರ ಬರೆದು, ದೇವಸ್ಥಾನದ ಹುಂಡಿಯನ್ನು ಸಹಾಯಕ ಆಯುಕ್ತರ ಸಮಕ್ಷಮ ತೆಗೆದು ಎಣಿಕೆ ಮಾಡಲು ತಿಳಿಸಿರುವುದು ಕಂಡು ಬರುತ್ತದೆ.

9. ಮೇಲೆ ಹೇಳಿದ ರಿಟ್ ಪೆಟಿಷನ್ ನಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯವು ದೇವಸ್ಥಾನಕ್ಕೆ ಸಂಬಂಧಿಸಿದ ಸಿಂಡಿಕೇಟ್ ಬ್ಯಾಂಕ್ ಖಾತೆಯ ವ್ಯವಹರಣೆಯನ್ನು ಅಧ್ಯಕ್ಷರು ಮತ್ತು ಸಹಾಯಕ ಆಯುಕ್ತರು ನಿರ್ವಹಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ, ಅದರಂತೆ ವ್ಯವಹರಣೆ ನಡೆಸಲು ಪತ್ರದ ಮುಖೇನ ತಿಳಿಸಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

ದೂರುದಾರರು ಕೋರಿದ ಮಾಹಿತಿಯನ್ನು ಒದಗಿಸಲು ಅವರ ಅರ್ಜಿಯನ್ನು ಶ್ರೀ ದುರ್ಗಪರಮೇಶ್ವರಿ ದೇವಸ್ಥಾನದ ಅಧ್ಯಕ್ಷರಿಗೆ ವರ್ಗಾಯಿಸಿರುವ ಬಗ್ಗೆ ತಿಳಿಸಿ ಪತ್ರ ಬರೆದಿದ್ದು, ಅದರ ಪ್ರತಿಯನ್ನು ಹಾಜರುಪಡಿಸಲಾಗಿದೆ. ಆದ್ದರಿಂದ, ಈ ಎಲ್ಲ ಮಾಹಿತಿಗಳನ್ನು ಪರಿಶೀಲಿಸಿದಲ್ಲಿ ಎದುರುದಾರರು ಎಲ್ಲ ಕ್ರಮ ಕೈಗೊಂಡಿರುವುದು ಕಂಡು ಬರುತ್ತದೆ. ಆದರೆ, ಎದುರುದಾರರ ಅಭಿಪ್ರಾಯದಂತೆ ಜಿಲ್ಲಾಧಿಕಾರಿಗಳು ಆಡಳಿತಾಧಿಕಾರಿಯನ್ನು ನೇಮಿಸಿರುವುದು ಕಂಡು ಬರುವುದಿಲ್ಲ. ಆದರೆ, ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಶ್ರೀ ದುರ್ಗಪರಮೇಶ್ವರಿ ದೇವಸ್ಥಾನದ ಆಡಳಿತ ಸಮಿತಿಯಲ್ಲಿ ಆಡಳಿತದ ಬಗ್ಗೆ ಹೊಂದಾಣಿಕೆ ಇಲ್ಲವೆಂದು ಹಾಗೂ ಹಣಕಾಸಿನ ವ್ಯವಹರಣೆಗೆ ಸಂಬಂಧಿಸಿದಂತೆ ಪಾರದರ್ಶಕತೆ ಇಲ್ಲದೇ ಇದ್ದುದ್ದು ಕಂಡು ಬರುತ್ತದೆ.

**10.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕಿನ ಚೇರ್ಕಾಡಿ ಗ್ರಾಮದ ಕನ್ನಾರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ 2013–14 ನೇ ಸಾಲಿನಿಂದ ಇಲ್ಲಿಯವರೆಗಿನ ದೇವಸ್ಥಾನದ ಹಣದ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಆಡಿಟ್ ಮಾಡಿಸಿ, ಆಡಿಟ್ ವರದಿಯಾನುಸಾರ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ದೇವಸ್ಥಾನದ ವ್ಯವಹರಣೆಯನ್ನು ಸರಿಪಡಿಸಲು ಆಡಳಿತಾಧಿಕಾರಿಯನ್ನು ನೇಮಿಸಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

25/5/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 25/5/17